OS No.18/2018 DW-1

**<u>ದಿನಾಂಕ 26.03.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಹೆಚ್ ಜಿ ಆರ್ ವಕೀಲರಿಂದಃ</u>**

ನಾನು 10 ನೇ ತರಗತಿಯವೆರೆಗೆ ಓದಿರುತ್ತೇನೆ.ಸಾಕ್ಷಿ ಪ್ರಮಾಣ ಪತ್ರದಲ್ಲಿರುವ ವಿಚಾರಗಳು ಗೊತ್ತಿದೆ. ನನ್ನ ತಾಯಿಯ ತಂದೆಯ ಹೆಸರು ರಾಮಸಂಜೀವಯ್ಯ. ಅವರಿಗೆ ಎಷ್ಟು ಜನ ಮಕ್ಕಳು ಎಂದು ಗೊತ್ತಿಲ್ಲ. ರಾಜಮ್ಮ ಮತ್ತು ಕೆಂಪಮ್ಮ ನನಗೆ ಗೊತ್ತಿಲ್ಲ. ರಾಮಸಂಜೀವಯ್ಯ ರವರ ತಂದೆಯ ಹೆಸರು ಸಂಜೀವೇಗೌಡ. ಅವರಿಗೆ ಇಬ್ಬರು ಹೆಂಡತಿಯರು. ಅವರ ಹೆಸರು ಚನ್ನಮ್ಮ ಮತ್ತು ಲಿಂಗಮ್ಮ ಎಂದರೆ ಸಾಕ್ಷಿಯು ಪುಟ್ಟೀಚಮ್ಮ ಮತ್ತು ಚನ್ನಮ್ಮ ಎಂದು ನುಡಿಯುತ್ತಾರೆ. ಚನ್ನಮ್ಮನ ಮಗ ರಾಮಸಂಜೀವಯ್ಯ ಎಂದರೆ ಸುಳ್ಳು. ಚನ್ನಮ್ಮನಿಗೆ 4 ಜನ ಮಕ್ಕಳು ಎಂದರೆ ಗೊತ್ತಿಲ್ಲ. ಪುಟ್ಟೀಚಮ್ಮ ಗೆ ಎಷ್ಟು ಜನ ಮಕ್ಕಳು ಎಂದು ಗೊತ್ತಿಲ್ಲ. ನನ್ನ ತಾಯಿ ರಾಮಸಂಜೀವಯ್ಯ ರವರ ಮಗಳು. ಮೊದಲನೇ ಹೆಂಡತಿ ಪುಟ್ಟೀಚಮ್ಮನ ಮಗ ರಾಮಸಂಜೀವಯ್ಯ ಎಂದರೆ ನಿಜ. ರಾಮಸಂಜೀವಯ್ಯ ಅಲಿಯಾಸ್ ಸಂಜೀವೇಗೌಡ ಎಂದರೆ ಸುಳ್ಳು. 2 ನೇ ಹೆಂಡತಿ ಚನ್ನಮ್ಮ ಗೆ 5 ಜನ ಮಕ್ಕಳು ಎಂದರೆ ಗೊತ್ತಿಲ್ಲ. ರಾಮಸಂಜೀವಯ್ಯ ರವರಿಗೆ 4 ಜನ ಮಕ್ಕಳು ಎಂದರೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಗಳು ನನ್ನ ಚಿಕ್ಕಮ್ಮ ಮತ್ತು ದೊಡ್ಡಮ್ಮ ಎಂದರೆ ಗೊತ್ತಿಲ್ಲ.

2. ಸಂಜೀವೇಗೌಡ ರವರ 4 ಜನ ಮಕ್ಕಳು ಭಾಗ ಮಾಡಿಕೊಂಡಿದ್ದಾರೆಂದರೆ ನಿಜ. ನನ್ನ ತಾತ ತೀರಿಕೊಂಡಿದ್ದರಿಂದ ನನ್ನ ತಾಯಿಯ ಹೆಸರಿನಲ್ಲಿ ಆಗಿದೆ ಎಂದರೆ ನಿಜ. ಆ ಸಮಯದಲ್ಲಿ 1980 ರಲ್ಲಿ ನನ್ನ ಅಜ್ಜಿ ಪುಟ್ಟಿಚನ್ನಮ್ಮ ಬದುಕಿದ್ದರು ಎಂದರೆ ಸಾಕ್ಷಿಯು ಅವರು ನನ್ನ ಅಜ್ಜಿ ಅಲ್ಲ ಎಂದು ನುಡಿಯುತ್ತಾರೆ. ರಾಮಸಂಜೀವಯ್ಯ ನ ಹೆಂಡತಿ ಚನ್ನಮ್ಮ ಎಂದರೆ ನಿಜ. 1980 ರಲ್ಲಿ ಚನ್ನಮ್ಮ ಬದುಕಿರಲಿಲ್ಲ. ಅವರು ತೀರಿಕೊಂಡಿದ್ದು ಯಾವಾಗ ಎಂದು ಗೊತ್ತಿಲ್ಲ. ರಾಮಸಂಜೀವಯ್ಯನವರಿಗೆ ಬಂದ ಆಸ್ತಿಗಳು ನನ್ನ ತಾಯಿಯ ಜೊತೆ 3 ಜನರಿಗೆ ಭಾಗ ಆಯಿತು ಎಂದರೆ ನಿಜ. ನನ್ನ ತಾಯಿಯ ಚಿಕ್ಕಪ್ಪಂದಿರ ಹೆಸರು ರಾಮಲಿಂಗಯ್ಯ, ಹನುಮಂತಯ್ಯ ಮತ್ತು ಬಸವರಾಜು ಎಂದರೆ ನಿಜ. ಇವರು

ಸಂಜೀವೇಗೌಡರವರ 2 ನೇ ಹೆಂಡತಿಯ ಮಕ್ಕಳು ಎಂದರೆ ನಿಜ. ಮೇಲೆ ಹೇಳಿದ 4 ಜನಕ್ಕೆ ಸಮ ಭಾಗ ಮಾಡಿದರು ಎಂದರೆ ನಿಜ. ರಾಮಸಂಜೀವಯ್ಯನವರಿಗೆ ಬಂದ ಆಸ್ತಿಗಳು ನನ್ನ ತಾಯಿಯ ಹೆಸರಿಗೆ ವರ್ಗಾವಣೆಯಾಯಿತು ಎಂದರೆ ನಿಜ. ರಾಮಸಂಜೀವಯ್ಯನವರಿಗೆ 4 ಜನ ಹೆಣ್ಣು ಮಕ್ಕಳು ಎಂದರೆ ಗೊತ್ತಿಲ್ಲ. ನನ್ನ ತಾತನ ವಂಶವೃಕ್ಷವನ್ನು ಕೊಡಲು ತೊಂದರೆ ಇಲ್ಲ.

3. ನನ್ನ ತಾಯಿಯನ್ನು ರಾಮಪುರದ ಸಿದ್ದಯ್ಯ ಅಲಿಯಾಸ್ ಸಿದ್ದೇಗೌಡರವರಿಗೆ ಮದುವೆ ಮಾಡಿಕೊಟ್ಟಿದ್ದರು ಎಂದರೆ ನಿಜ. ಕೆಂಪಮ್ಮರವರನ್ನು ಚಿಕ್ಕನದೊಡ್ಡಿಗೆ ಮದುವೆ ಮಾಡಿಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ರಾಜಮ್ಮ ಎನ್ನುವವರು ಮಂಡ್ಯಗೆ ಮದುವೆ ಮಾಡಿಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ಪ್ರತಿವಾದಿ 1(ಎ) ಮತ್ತು 1(ಬಿ) ರವರಿಗೆ ಎಂ ಎಂ ಆರ್ ವಕಾಲತ್ತು ಹಾಕಿದ್ದಾರೆಂದರೆ ನಿಜ. ಕೆಂಪಮ್ಮ ಮತ್ತು ರಾಜಮ್ಮ ರವರ ಬಗ್ಗೆ ಪ್ರತಿವಾದ ಪತ್ರದಲ್ಲಿ ತಿಳಿಸಿಲ್ಲ. ಅವರು ನನ್ನ ಚಿಕ್ಕಮ್ಮ ಮತ್ತು ದೊಡ್ಡಮ್ಮ ಎಂದರೆ ಸುಳ್ಳು.

4. ತಹಶೀಲ್ದಾರ್ ರವರ ಕಡೆಯಿಂದ ವಂಶವೃಕ್ಷ ಪಡೆಯಲು ಆಧಾರ್ ಕಾರ್ಡ್ ಅನ್ನು ಕೊಡಬೇಕಾಗುತ್ತದೆ ಎಂದರೆ ನಿಜ. ನನ್ನ ಆಧಾರ್ ಕಾರ್ಡ್ ಅನ್ನು ಹಾಜರುಪಡಿಸುತ್ತೇನೆ. ರಾಮಸಂಜೀವಯ್ಯ ರವರಿಗೆ ಬಂದ ಆಸ್ತಿಗಳಲ್ಲಿ ಕೆಂಪಮ್ಮ ಮತ್ತು ರಾಜಮ್ಮರವರಿಗೆ ಹಕ್ಕು ಇದೆ ಎಂದರೆ ಸುಳ್ಳು. ನಿಪಿ-7 ರಲ್ಲಿ ಸಂಜೀವಮ್ಮ ಕೋಂ ಸಂಜೀವೇಗೌಡ ಎಂದು ನಮೂದು ಇದೆ ಎಂದರೆ ಸಾಕ್ಷಿಯು ಅದು ಸುಳ್ಳು ಇದೆ ಎಂದು ನುಡಿಯುತ್ತಾರೆ. ಬದಲಾವಣೆಗೆ ಕೊಟ್ಟ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಿಪಿ-16 ರಲ್ಲಿ ಒಬ್ಬಳೇ ಹೆಣ್ಣು ಮಗಳು ಎಂದು ನಮೂದು ಇದೆ ಎಂದರೆ ನಿಜ. ನಿಪಿ-18 ರ ಪ್ರಕಾರ ಎಸಿ ಮುಂದೆ ಅರ್ಜಿ ಹಾಕಿದ್ದಾರೆಂದರೆ ನಿಜ. ಇದನ್ನು ವಜಾ ಮಾಡಿದ್ದಾರೆಂದರೆ ಸುಳ್ಳು. ಇದರಲ್ಲಿ ತಡೆಯಾಜ್ಞೆ ಆಗಿತ್ತು ಎಂದರೆ ಗೊತ್ತಿಲ್ಲ. ಈ ಸಮಯದಲ್ಲಿ ನಿಪಿ-13 ರಂತೆ ಭಾಗ ಮಾಡಿಕೊಂಡಿದ್ದೆವು ಎಂದರೆ ಸಾಕ್ಷಿಯು ತಡೆಯಾಜ್ಞೆ ಇರುವುದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-17 ರಂತೆ ತಹಶೀಲ್ದಾರ್ ರವರ ಪ್ರಕರಣ ದಾಖಲಿಸಿ ನಮಗೆ ನೋಟೀಸ್ ಕೊಟ್ಟಿದ್ದರು ಎಂದರೆ ನಿಜ. ಈ ಪ್ರಕರಣದಲ್ಲಿ ಎಸಿ ತಡೆಯಾಜ್ಞೆ ಬಗ್ಗೆ ನಮೂದು ಮಾಡಿದ್ದಾರೆಂದರೆ ನಿಜ. ನಿಪಿ-13 ರಂತೆ ಕಾನೂನು ಬಾಹಿರವಾಗಿ ಭಾಗ ಮಾಡಿಕೊಂಡಿರುತ್ತೇವೆಂದರೆ ಸುಳ್ಳು. ನಾವು ಭಾಗ ಮಾಡಿಕೊಂಡಂತೆ ನಿಪಿ-13 ರ ಪ್ರಕಾರ ನಿಪಿ-17 ಅನ್ನು ತಹಶೀಲ್ದಾರ್ ರವರು ಮಾಡಿದರು ಎಂದರೆ ಸಾಕ್ಷಿಯು ಕಾನೂನು ಪ್ರಕಾರ ಮಾಡಿರುತ್ತಾರೆಂದು ನುಡಿಯುತ್ತಾರೆ. ನಿಪಿ-17 ರಲ್ಲಿ

ಸಿವಿಲ್ ನ್ಯಾಯಾಲಯಕ್ಕೆ ಹೋಗಲು ತಿಳಿಸಿದ್ದರು ಎಂದರೆ ನಿಜ. ನಾವು ತಹಶೀಲ್ದಾರ್ ರವರ ಜೊತೆ ಕೈಜೋಡಿಸಿ ಆದೇಶ ಮಾಡಿಸಿಕೊಂಡಿರುತ್ತೇವೆಂದರೆ ಸುಳ್ಳು. ತಹಶೀಲ್ದಾರ್ ರವರ ಆದೇಶ ಪಡೆಯಲು ಭಾಗವನ್ನು ಮಾಡಿಕೊಂಡಿರುತ್ತೇವೆಂದರೆ ಸುಳ್ಳು. ಕೆಂಪಮ್ಮ,ರಾಜಮ್ಮ, ಮತ್ತು ಸಂಜೀವಮ್ಮ ರವರ ರಾಮಸಂಜೀವಯ್ಯ ಮತ್ತು ಚನ್ನಮ್ಮನ ಮಕ್ಕಳು ಎಂದರೆ ಗೊತ್ತಿಲ್ಲ. ಅವರಿಗೆ ಭಾಗ ಕೊಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸುಳ್ಳು. ವೈದ್ಯಕೀಯ ಪರೀಕ್ಷೆ ಮಾಡಿಸಲು ನನಗೆ ತೊಂದರೆ ಇಲ್ಲ. ಸಂಜೀವೇಗೌಡರವರ ವಂಶವೃಕ್ಷವನ್ನು ಹಾಜರುಪಡಿಸಲು ತೊಂದರೆ ಇಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**